ಸಿ.ಸಿ .ನಂ.23/2023 ಪಿಡಬ್ಲೂಃ 1

ದಿನಾಂಕಃ 07-12-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಮಧ್ಯಂತರ ಅರ್ಜಿ ಮೇರೆಗೆಃ ಆರೋಪಿಯ ಪರವಾಗಿಃ ಶ್ರೀ ಎಸ್ ಯು ಎ ವಕೀಲರಿಂದಃ**

11. ನಾನು ಫಿರ್ಯಾದನ್ನು ದಾಖಲಿಸಿರುವುದನ್ನು ಆರೋಪಿಗೆ ನೀಡಿರುವ ನೋಟಿಸು ಹಾಗೂ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ಓದಿ ಖಾತ್ರಿ ಪಡಿಸಿಕೊಂಡು ಈ ದಿನ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿ . ನಿಪಿ-7 ರಿಂದ ನಿಪಿ-17 ರವರೆಗೆ ಬಿಲ್ ಗಳಲ್ಲಿ ಬಿಲ್ ನಂಬರ ಸ್ಪಷ್ಟವಾಗಿ ನಮೂದಿದೆ ಎಂದರೆ ಸರಿ . ಪ್ರತಿಯೊಂದು ಬಿಲ್ ನಲ್ಲು ನಮ್ಮ ಜಿಎಸ್ ಟಿ ನಂಬರನ್ನು ನಮೂದಿಸಿದ್ದಾರೆ ಎಂದರೆ ಸರಿ . ನಿಪಿ-18 ದಿಃ 18-01-2019 ಕ್ಕೆ ಬರೆದಿದೆ ಎಂದು ನಮ್ಮ ಪ್ರತಿಪಾದನೆ ಎಂದರೆ ಸರಿ . ನಿಪಿ-18 ರಲ್ಲಿ ಬಿಲ್ ನಂಬರ ಇಲ್ಲ ಎಂದರೆ ಸಾಕ್ಷಿ ಅದು ಕಚ್ಚಾ ಪಟ್ಟಿ ದುಡ್ಡು ಬಂದ ಮೇಲೆ ಅವರಿಗೆ ಪಕ್ಕಾ ಬಿಲ್ ಕೊಡುತ್ತೇವೆ ಎಂದು ನುಡಿದಿರುತ್ತಾರೆ. ಹಣ ಬರಬೇಕಾದ ಬಾಕಿ ಇದೆ ಎಂದು ಬಿಲ್ ಇಶು ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಚೆಕ್ ಕೊಟ್ಟಿದ್ದರು , ಆದರೆ ಅದು ಪಾಸಾಗಿರಲಿಲ್ಲ ಕಾರಣ ಬಿಲ್ ಕೊಟ್ಟಿಲ್ಲ ಹಾಗೂ ಅವರ ಜಿಎಸ್ ಟಿ ನಂಬರ ಇಲ್ಲ . ಆರೋಪಿಗೆ ಮಾರಾಟ ಮಾಡಿರುವುದನ್ನು ಬಿಟ್ಟು ನನ್ನ ಬಳಿ ಬೇರೆಯವರಿಗೆ ಮಾರಾಟ ಮಾಡಿದ ಸೇಲ್ ಬಿಲ್ ಗಳು ಇವೆ . ಬೇರೆಯವರಿಗೆ ಎಷ್ಟು ಮಾರಾಟ ಮಾಡಿದ್ದೇವೆ ಅದನ್ನು ವಜಾ ಮಾಡಿದರೆ ನಮ್ಮ ಪ್ರತಿಪಾದನೆ ಪ್ರಕಾರ ಬರುವ ದುಡ್ಡು ಗೊತ್ತಾಗುತ್ತದೆ ಎಂದರೆ ಸಾಕ್ಷಿ ಬಾಕಿಯವರು ಅದೇ ದಿನ ಖರೀದಿ ಮಾಡಿದ್ದು ಇದೆ ಎಂದು ನುಡಿದಿರುತ್ತಾರೆ. ನಾನು ಎಷ್ಟು ಜನರಿಂದ ಅಡಿಕೆ ಖರೀದಿ ಮಾಡಿದ್ದೇನೆ ಹಾಗೂ ಎಷ್ಟು ಅಡಿಕೆ ಮಾರಾಟ ಮಾಡಿದ್ದೇನೆ ಆ ಬಗ್ಗೆ ಬಿಲ್ ಗಳ ಲೆಕ್ಕಾಚಾರ ಜಿಎಸ್ ಟಿ ಕಚೇರಿಯಲ್ಲಿರುತ್ತದೆ ಎಂದರೆ ಸರಿ . ಆರೋಪಿ ಮಧ್ಯಂತರ ಅರ್ಜಿ ಸಲ್ಲಿಸಿ ಜಿಎಸ್ ಟಿ ಬಿಲ್ ಗಳನ್ನು ಕೇಳಿದ್ದರು , ಆಗ ನಾನು ಹಾಜರು ಪಡಿಸಿದ ಎಲೆಕ್ಟ್ರಾನಿಕ್ ಕ್ರೆಡಿಟ್ ಲೆಡ್ಜರ್ ಹೊರತು ಪಡಿಸಿ ಬೇರೆ ಯಾವುದೇ ಹಾಜರು ಮಾಡಿಲ್ಲ ಎಂದರೆ ಸರಿ . ದಿಃ 12 ಮತ್ತು

13 ರಲ್ಲಿ ದಿಃ 18-01-2019 ಎಂದು ಬರೆದಿದೆ ಎಂದರೆ ಸಾಕ್ಷಿ ದಲ್ಲಾಳಿಗಳು ಇವತ್ತು ನಾವು ಖರೀದಿ ಮಾಡಿದರೆ ಅದನ್ನು ಮುಂದಿನ ತಿಂಗಳು 10 ರಿಂದ 18 ನೇ ತಾರೀಖಿನವರೆಗೆ ಜಿಎಸ್ ಟಿ ತುಂಬಲು ಅವಕಾಶ ಇದೆ. ನಾವು ಬಿಲ್ ತೆಗೆಯಬೇಕಾದರೆ ನಮ್ಮ ಜಿಎಸ್ ಟಿ ಅವರಿಗೆ ಹೋಗುತ್ತದೆ ಎಂದು ನುಡಿದಿರುತ್ತಾರೆ. ನಾನು ಹಾಜರು ಪಡಿಸಿದ ಎಲೆಕ್ಟ್ರಾನಿಕ್ ಲೆಡ್ಜರನಲ್ಲಿರುವ ವ್ಯವಹಾರ ಆಗಿರಬಹುದು ಆಗಿಲ್ಲದೇ ಇರಬಹುದು. ಸದರಿ ಶೀಟ್ ನನ್ನ ವ್ಯವಹಾರಕ್ಕೆ ಸಂಬಂಧಪಟ್ಟ ಲೆಡ್ಜರ ಶೀಟ್ . ದಿಃ 18-01-2019 ಕ್ಕೆ ಏನು ನಡೆದಿದೆ ಸತ್ಯ ಘಟನೆ ಜಿಎಸ್ ಟಿ ಆಫೀಸ್ ನಲ್ಲಿ ಇರುತ್ತದೆ ಎಂದರೆ ಸರಿ . ದಿಃ 19-05-2018 ರಿಂದ ದಿಃ 20-04-2019 ರವರೆಗೆ ಈ ವ್ಯವಹಾರದ ಬಗ್ಗೆ ನಾನು ಹಾಜರು ಪಡಿಸಿದ ಎಲೆಕ್ಟ್ರಾನಿಕ್ ಲೆಡ್ಜರನಲ್ಲಿ ನಮೂದಿದೆ ಎಂದರೆ ಸರಿ . ವ್ಯವಹಾರ ಆಗಿರಬಹುದು ಆಗದೇ ಇರಬಹುದು ಇದು ನನ್ನ ಪ್ರತಿಪಾದನೆ ಎಂದರೆ ಸರಿ . ಎಲೆಕ್ಟ್ರಾನಿಕ್ ಲೆಡ್ಜರ ಪ್ರಿಂಟ್ ನ್ನು ಶ್ರೀ ಕೆ ಎಸ್ ಭಟ್ ವಕೀಲರ ಮೂಲಕ ತೆಗೆಸಿರುತ್ತೇನೆ . ಪ್ರತಿಯೊಂದು ಟ್ರಾನ್ಸೆಕ್ಷನಲ್ಲೂ ಉಳಿದ ದಾಖಲಾತಿಗಳು ಇರುತ್ತವೆ ಎಂದರೆ ಸರಿಯಲ್ಲ. ಎಲೆಕ್ಟ್ರಾನಿಕ್ ಲೆಡ್ಜರನ್ನು ಹೊರತು ಪಡಿಸಿ ಜಿಎಸ್ ಟಿ ಕಚೇರಿಯಲ್ಲಿ ಬೇರೆ ದಾಖಲಾತಿ ಇದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ . ದಿಃ 19-05-2018 ರಿಂದ ದಿಃ 20-04-2019 ರವರೆಗೆ ವ್ಯವಹಾರದ ಬಗ್ಗೆ ಹೇಳುವ ದಾಖಲಾತಿಯನ್ನು ಜಿಎಸ್ ಟಿ ಕಚೇರಿಯಿಂದ ದಾಖಲಾತಿಯನ್ನು ನ್ಯಾಯಾಲಯದ ಮೂಲಕ ತರಿಸಿದರೆ ನನ್ನ ಯಾವುದೇ ತಕರಾರು ಇಲ್ಲ .

12. ನನ್ನ ನೋಟಿಸು ಹಾಗೂ ಕಂಪ್ಲೆಂಟ್ ನಲ್ಲಿ ದಿಃ 21-03-2019 ರಂದು ಆರೋಪಿ ಚೆಕ್ ಕೊಟ್ಟಿದ್ದಾರೆ ಎಂದು ನನ್ನ ಪ್ರತಿಪಾದನೆ ಎಂದರೆ ಸರಿ . ಮಾಲು ತೆಗೆದುಕೊಂಡು ಹೋಗುವಾಗ ಚೆಕ್ ನ್ನು ಕೊಟ್ಟು ದಿಃ 21-03-2019 ರಂದು ಬ್ಯಾಂಕಿಗೆ ಹಾಕು ಎಂದು ಹೇಳಿದ್ದರು . ಈ ವಿಷಯವನ್ನು ನಾನು ನಮ್ಮ ವಕೀಲರಿಗೆ ಹೇಳಿದ್ದೇನೆ . ನಮ್ಮ ವಕೀಲರು ಚೆಕ್ ನ್ನು ದಿಃ 21-03-2019 ರಂದು ನಿಮ್ಮ ಪಕ್ಷಗಾರರು ಚೆಕ್ ನು ಕೊಟ್ಟಿದ್ದಾರೆ ಎಂದು ಬರೆದಿದೆ ಎಂದರೆ ಸರಿ . ನಿಪಿ-18 ರಲ್ಲಿರುವ ಹಸ್ತಾಕ್ಷರ ನನ್ನದೇ

ಆಗಿರುತ್ತದೆ. ಎಲೆಕ್ಟ್ರಾನಿಕ್ ಲೆಡ್ಜರನಲ್ಲಿ ಖರೀದಿ ಮಾಡಿದ ಬಿಲ್ ಗಳು ಟ್ರಾನ್ಸೆಕ್ಷನ್ ನಮೂದು ಆಗಿಲ್ಲ . ಅದನ್ನು ದಲ್ಲಾಳರು ಮಾಡುತ್ತಾರೆ . ಅದನ್ನು ನಮೂದು ಮಾಡಿದ್ದಾರೋ ಇಲ್ಲವೋ ಖಾತ್ರಿ ಪಡಿಸಿಕೊಳ್ಳಬೇಕೆಂದರೆ ಜಿಎಸ್ ಟಿ ಕಚೇರಿಯಿಂದ ದಾಖಲಾತಿಗಳನ್ನು ತರಿಸಿಕೊಳ್ಳವಬೇಕು ಎಂದರೆ ಸರಿ . ಎಲೆಕ್ಟ್ರಾನಿಕ್ ಲೆಡ್ಜರನ ಪ್ರಕಾರ ದಿಃ 19-01-2018 ರಿಂದ 24-05-2019 ರವರೆಗೆ ಜಿ ಎಸ್ ಟಿ ಕಚೇರಿಯಿಂದ ದಾಖಲಾತಿಗಳನ್ನು ತರಿಸಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದರೆ ಸರಿ . ಕುಮಟಾ ಜಿಎಸ್ ಟಿ ಆಫೀಸ್ ಸರ್ಕಾರಿ ಕಚೇರಿ ಎಂದರೆ ಸರಿ . ಅರ್ಜಿ ಪ್ರಕಾರ ನ್ಯಾಯಾಲಯದ ಮೂಲಕ ದಾಖಲಾತಿ ತರಿಸಲು ನನ್ನ ಯಾವುದೇ ತಕರಾರು ಇಲ್ಲ . ಆರೋಪಿಗೆ 15 ಕ್ವಿಂಟಲ್ 71 ಕೆಜಿ ಅಡಿಕೆಯನ್ನು ಕೊಟ್ಟಿದ್ದೆನೆಂದು ಹೇಳುವದರ ಪ್ರಕಾರ ಅದನ್ನು ತೆಗೆದುಕೊಂಡು ಹೋಗಲು ವಾಹನ ಬೇಕಾಗುತ್ತದೆ ಎಂದರೆ ಸರಿ . ವಾಹನಕ್ಕೆ ಇವೆಲ್ ಬಿಲ್ ಕೊಡಲಾಗುತ್ತದೆ ಎಂದರೆ ಸಾಕ್ಷಿ ಅವರು ಪೆಮೆಂಟ್ ಮಾಡಿಲ್ಲ ಕಾರಣ ಇವೆಲ್ ಬಿಲ್ ಕೊಟ್ಟಿಲ್ಲ. ಒಂದು ಎಪಿ ಎಮ್ ಸಿ ಯಿಂದ ಅಡಿಕೆ ಅಂತಹ ವಸ್ತುಗಳು ಇನ್ನೊಂದು ಎಪಿ ಎಮ್ ಸಿ ಗೆ ಹೋಗಬೇಕಾದರೆ ಇವೆಲ್ ಬಿಲ್ ಬೇಕಾಗುತ್ತದೆ ಎಂದರೆ ಸರಿಯಲ್ಲ . ವ್ಯವಹಾರ ಸರಿ ಮಾಡಿದ ಎಲ್ಲಾ ಗ್ರಾಹಕರಿಗೆ ಇವೆಲ್ ಬಲ್ ಕೊಟ್ಟಿರುತ್ತೇನೆ ಹಾಗೂ ಎಪಿಎಮ್ ಸಿ ಪರ್ಮಿಟ್ ಕೂಡ ಕೊಡುತ್ತೇವೆ . ಇವೆಲ್ ಬಿಲ್ ದಾಖಲಾತಿಯನ್ನು ಜಿಎಸ್ ಟಿ ಆಫೀಸ್ ಗೆ ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ.

13. 2005 ರಲ್ಲಿ ವರದಾ ಗ್ರಾಮೀಣ ಬ್ಯಾಂಕ್ ಕರ್ನಾಟಕ ಗ್ರಾಮೀಣ ವಿಕಾಸ ಬ್ಯಾಂಕ್ ಎಂದು ಹೆಸರು ಬದಲಾವಣೆಯಾಗಿದೆ ಎಂದರೆ ಸರಿ . ನಾನು ಇವೆಲ್ ಬಿಲ್ ಕೊಡದಿದ್ದರೆ ನಾನು ಯಾವುದೇ ಅಡಿಕೆ ಮಾಲನ್ನು ಆರೋಪಿಗೆ ಕೊಟ್ಟಿಲ್ಲ ಎಂದಾಗುತ್ತದೆ ಎಂದರೆ ಸುಳ್ಳು . ನಾನು ಅಡಿಕೆಯನ್ನು ಕೊಟ್ಟದಿದ್ದರೆ ಇದು ಬರತಕ್ಕದು ಬಾಕಿ ಇದೆ ಎಂದು ತೋರಿಸಬೇಕಾಗುತ್ತದೆ ಎಂದರೆ ಸಾಕ್ಷಿ ಬಿಲ್ ತೆಗೆದರೆ ಮಾತ್ರ ತೋರಿಸಬೇಕಾಗುತ್ತದೆ ಎಂದು ನುಡಿದಿರುತ್ತಾರೆ . ಆರೋಪಿ ಅರ್ಜಿಯನ್ನು ಹಾಕಿದಾಗ ನಾನು ಜಿಎಸ್ ಟಿ ದಾಖಲಾತಿಗಳನ್ನು ಹಾಜರು ಪಡಿಸದೇ ಕೇವಲ ಎಲೆಕ್ಟ್ರಾನಿಕ್ ಲೆಡ್ಜರನ್ನು ಹಾಜರು ಪಡಿಸಿದ್ದೇನೆ ಎಂದರೆ

ಸುಳ್ಳು . ಇವೆಲ್ ಬಿಲ್ ಹಾಗೂ ಸೇಲ್ ಬಿಲ್ ಹಾಗೂ ಜಿಎಸ್ ಟಿ ದಾಖಲಾತಿ ಹಾಜರು ಪಡಿಸಿದರೆ ಆರೋಪಿಯ ಜೊತೆಗೆ ವ್ಯವಹಾರ ಮಾಡಿಲ್ಲದೇ ಇರುವುದು ಖಾತ್ರಿ ಆಗುತ್ತದೆ ಎಂದರೆ ಸುಳ್ಳು . ಆರೋಪಿ ಅರ್ಜಿಯನ್ನು ಹಾಕಿ ದಾಖಲಾತಿಯನ್ನು ಕೇಳಿದಾಗ ಎಲೆಕ್ಟ್ರಾನಿಕ್ ಲೆಡ್ಜರನನ್ನು ನಾನೇ ಹಾಜರು ಪಡಿಸಿದ್ದೇನೆ. ಸದ್ರಿ ದಾಖಲಾತಿಯ ಪ್ರಕಾರ 18-01-2019 ಕ್ಕೆ ಎರಡು ರೆಫರೆನ್ಸ ನ ಒಂದು ಟ್ರಾನ್ಸೆಕ್ಷನ್ ಕಾಣುತ್ತದೆ ಎಂದರೆ ಸುಳ್ಳು . ನನ್ನ ಪ್ರಕಾರ ಎಲೆಕ್ಟ್ರಾನಿಕ್ ಲೆಡ್ಜರ ಸತ್ಯ ದಾಖಲಾತಿ . ಸದರಿ ದಾಖಲಾತಿಯಲ್ಲಿ ಯಾವ ಯಾವ ದಿನಾಂಕದಂದು ಯಾವ ಯಾವ ಟ್ರಾನ್ಸೆಕ್ಷನ್ ಆಗಿದೆ ಒಪ್ಪಿಕೊಳ್ಳುತ್ತೇನೆ. ದಿಃ 18-01-2019 ರಂದು ಎರಡು ಟ್ರಾನ್ಸೆಕ್ಷನ್ ಗಳು ನಡೆದಿರುವುದು ಕಂಡು ಬರುತ್ತದೆ ಎಂದರೆ ಸರಿಯಲ್ಲ. ದಿಃ 18-01-2019 ರಂದು ಎರಡು ಟ್ರಾನ್ಸೆಕ್ಷನ್ ಗಳು ನಡೆದಿದೆ ಆ ಟ್ರಾನ್ಸೆಕ್ಷನ್ ನಲ್ಲಿ ಎಲ್ಲಾ ಟ್ಯಾಕ್ಸಗಳು ನಮೂದಾಗಿವೆ ಎಂದರೆ ಸಾಕ್ಷಿ ದಲ್ಲಾಳುಗಳು ಬೇರೆ ಬೇರೆ ದಿನಾಂಕಗಳಲ್ಲಿ ಜಿಎಸ್ ಟಿ ತುಂಬಿರುತ್ತಾರೆ ಅದು ಆ ದಾಖಲಾತಿಯಲ್ಲಿ ಬಂದಿರುತ್ತದೆ . ಎಷ್ಟು ತಾರೀಖಿನಿಂದ ಎಷ್ಟು ತಾರೀಖಿನವರೆಗೆ ಅಡಿಕೆ ಟ್ರಾನ್ಸೆಕ್ಷನ್ ಆಗಿದೆ ಸದರಿ ರೆಫರೆನ್ಸ ಮೂಲಕ ಗೊತ್ತಾಗುತ್ತದೆ ಎಂದರೆ ಸರಿ . ಲೆಡ್ಜರ ಎಕ್ಸ್ಟ್ರಾಕ್ಟನ ಮೂಲ ದಾಖಲಾತಿಗಳನ್ನು ತರಿಸಲು ನನ್ನ ಯಾವುದೇ ತಕರಾರು ಇಲ್ಲ . ನನ್ನದು ಅಡಿಕೆ ವ್ಯವಹಾರ ಬಿಟ್ಟು ಬೇರೆ ಯಾವುದೇ ವ್ಯವಹಾರ ಇಲ್ಲ. ಆರೋಪಿ ನನ್ನ ಜೊತೆ ಯಾವುದೇ ಅಡಿಕೆ ವ್ಯವಹಾರ ಮಾಡಿಲ್ಲ ಹಾಗೂ ಅವರು ನನಗೆ ಯಾವುದೇ ಬಾಕಿ ಹಣ ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಅವರು ನೀಡಿರುವ ರಿಪ್ಲ್ಯಾ ನೋಟಿಸಿನಲ್ಲಿ ಆ ಬಗ್ಗೆ ಹೇಳಿದ್ದಾರೆ ಎಂದು ನುಡಿದಿರುತ್ತಾರೆ . ರಪ್ಲ್ಯಾ ನೋಟಿಸಿನಲ್ಲಿ ಆರೋಪಿ 15 ಕ್ವಿಂಟಲ್ 71 ಕೆಜಿ ಎಂದು ಬರೆದಿಲ್ಲ . ನಾನೇ ಯಾವುದೋ ವಕೀಲರ ಮೂಲಕ ಆರೋಪಿಯ ಹೆಸರನ್ನು ಹಾಕಿ ರಿಪ್ಲ್ಯಾ ನೋಟಿಸ್ ಕೊಟ್ಟಿದ್ದೇನೆ ಎಂದರೆ ಸುಳ್ಳು . ರಿಪ್ಲ್ಯಾ ನೋಟಿಸಿನಲ್ಲಿ ನಾನು ಹೇಳಿದಂತಹ ಯಾವುದೇ ವ್ಯವಹಾರ ಆಗಿಲ್ಲ ಎಂದು ಬರೆದಿದ್ದಾರೆ ಎಂದರೆ ಸುಳ್ಳು . ನಾನು ನೀಡಿದ ನೋಟಿಸಿನಲ್ಲಿರುವ ವಿಚಾರಗಳು ಸುಳ್ಳು ಎಂದು ಆರೋಪಿ ರಿಪ್ಲ್ಯಾ ನೋಟಿಸಿನಲ್ಲಿ ಬರೆದಿದ್ದಾರೆ ಎಂದರೆ ಸರಿಯಲ್ಲ . ರಿಪ್ಲ್ಯಾ ನೋಟಿಸು ಓದಿದ್ದೇನೆ. ಸದರಿ ರಿಪ್ಲ್ಯಾ ನೋಟಿಸಿನಲ್ಲಿ ಆರೋಪಿ ನನ್ನ ಹಾಗೂ ಅವರ ನಡುವೆ ವ್ಯವಹಾರ

ಪಿಡಬ್ಲೂಃ 1

ಆಗಿದೆ ಎಂದು ಹೇಳಿದ್ದಾರೆ. ಆ ರೀತಿ ಯಾವುದೇ ವಿಷಯವನ್ನು ಆರೋಪಿ ಹೇಳಿಲ್ಲ ಎಂದರೆ ಸರಿಯಿಲ್ಲ . ನಾನು ಹಾಜರು ಪಡಿಸಿದ ರಿಪ್ಲ್ಯಾ ನೋಟಿಸಿನಲ್ಲಿ ಆ ರೀತಿ ಯಾವುದೇ ವಿಷಯ ಇಲ್ಲ ಎಂದರೆ ಸರಿಯಲ್ಲ . ಆರೋಪಿ ರಿಪ್ಲ್ಯಾ ನೋಟಿಸನ್ನು ಕಳುಹಿಸಿದ ಅಂಚೆ ಲಕೋಟೆ ಇಲ್ಲ. ಹೇಗಾದರೂ ಮಾಡಿ ಆರೋಪಿಯಿಂದ ಹಣ ವಸೂಲು ಮಾಡುವ ಎಂದು ಈ ಸುಳ್ಳು ಕೇಸನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ .

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.